ಈ) 5 ವರ್ಷಗಳು

ಉ) ಬಿ.ಎಂ.ಎಸ್. ಟ್ರಸ್ಟ್‌ರವರು ವಿನಿಮಯ ಮಾಡಲಾಗಿರುವ ಜಮೀನಿನ ಆವರಣದಲ್ಲಿ ಕಾಲೇಜನ್ನು ನಡೆಸುತ್ತಿದ್ದು ದೇವಾಲಯದ ಜಮೀನು ಖಾಲಿ ಇದ್ದು ಸದರಿ ನಿವೇಶನದಲ್ಲಿ ಕಾಲೇಜಿನ ಕಟ್ಟಡ ಪೂರ್ಣ ಆಗುವವರೆಗೂ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಸದರಿ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

ಊ) ಇಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಂಪಿ ಶ್ರೀ ವಿರೂಪಾಕ್ಷ ದೇವಸ್ಥಾನದಲ್ಲಿ ನಡೆದಿರುವ ಅವ್ಯವಹಾರ

993 - ಶ್ರೀ ಸೋಮಪ್ಪ ಸುವರ್ಣ (ಮುಡಬಿದರೆ): ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ?

ಅ) ಹಂಪಿಯ ಶ್ರೀ ವಿರೂಪಾಕ್ಷಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿರುವುದ?

ಆ) ಆ ದೇವಸ್ಥಾನದ ವಿಗ್ರಹಗಳ ಪುನರ್ ಪ್ರತಿಷ್ಠಾಪನೆ ನಡೆದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಸರ್ಕಾರದ ಅನುಮತಿ ಪಡೆಯಲಾಗಿತ್ತೆ?

ಈ) ದೇವರ ವಿಗ್ರಹಗಳನ್ನು ಪುನರ್ ಪ್ರತಿಷ್ಠಾಪನೆ ಮಾಡುವ ಸಂದರ್ಭದಲ್ಲಿ ವಿಗ್ರಹಗಳ ಕೆಳಗೆ ಇದ್ದ ನಿಧಿ ಕಣ್ಮರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ?

ಉ) ಈ ಬಗ್ಗೆ ಸರ್ಕಾರವು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸಿ.ಒ.ಡಿ. ತನಿಖೆಯನ್ನು ಆರಂಭಿಸಲಾಗಿದೆಯೇ? ಹಾಗಿದ್ದ ಪಕ್ಷದಲ್ಲಿ ತನಿಖೆಯು ಯಾವ ಹಂತದಲ್ಲಿದೆ?

ಊ)ತನಿಖೆಯನ್ನು ಕೈಗೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ನಿಧಿ ಕಣ್ಮರೆಯಾದ ಬಗ್ಗೆ ತಕರಾರು ಅರ್ಜಿ ಹಾಗೂ ಪತ್ರಿಕಾ ವರದಿ ಬಂದಿರುತ್ತದೆ.

ಉ) ಈಗ ತಾನೇ ಸಿ.ಒ.ಡಿ. ತನಿಖೆಗೆ ಒಪ್ಪಿಸಲಾಗಿದೆ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಅತಿವೃಷ್ಟಿಯಿಂದ ಹಾನಿಯಾದ ಬೆಳೆಗೆ ಪರಿಹಾರ ಧನ

355-ಶ್ರೀ ಬಿ.ಹೆಚ್. ಬನ್ನೀಕೋಡ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಬೆಳೆಗೆ ಸರ್ಕಾರವು ಪ್ರತಿ ಹೆಕ್ಟೇರಿಗೆ ನಿಗಧಿ ಮಾಡಿರುವ ಸಹಾಯ ಧನದೇ ಮೊತ್ತವೆಷ್ಟು?

ಆ) ಹಾಗಿದ್ದಲ್ಲಿ, ಈಗಿನ ರಾಸಾಯನಿಕ ಗೊಬ್ಬರದ ಅತೀವ ಬೆಲೆ ಏರಿಕೆ ಮತ್ತು ಮಿತಿಮೀರಿದ ವ್ಯವಸಾಯದ ಖರ್ಚನ್ನು ಸರ್ಕಾರವು ಗಮನಿಸಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರವು ಅತಿವೃಷ್ಟಿಯಿಂದ ಹಾನಗೊಳಗಾದ ರೈತರ ಬೆಳೆಗೆ ಸೂಕ್ತ ಸಹಾಯ ಒದಗಿಸಿ ಪರಿಹಾರ ಧನ ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ?

ಈ) ಈ ಬಗ್ಗೆ ಸರ್ಕಾರದ ಕ್ರಮಗಳೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ 500.00 ರೂಪಾಯಿಗಳ ಬೆಲೆಯ ವ್ಯವಸಾಯದ ಸಾಮಗ್ರಿಗಳನ್ನು ರೈತರಿಗೆ ನೀಡಲಾಗುತ್ತಿದೆ.

ಆ) ಗಮನಿಸಿದೆ.

ಇ) ಈಗಾಗಲೇ ಸರ್ಕಾರವು ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ನೀಡುವ ಪರಿಹಾರವನ್ನು ರೂ.300 ದಿಂದ ರೂ. 500 ಕ್ಕೆ ದಿನಾಂಕ 4.12.92ರಿಂದ ಏರಿಸಲಾಗಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕೆ ಜಾಗ ನಿಗಧಿ.

387- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗ ನಿಗಧಿ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಸರ್ಕಾರವು ಈ ಹಿಂದೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸಾಕಷ್ಟು ಜಮೀನನ್ನು ದೊರೆಕಿಸಿ ಕೊಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಿರುತ್ತದೆ. ಇತ್ತೀಚೆಗೆ ಅಂದರೆ ಆಗಸ್ಟ್ 1992ರಲ್ಲಿ, ಸರ್ಕಾರಿ ಜಮೀನಿನಲ್ಲಿ ಸ್ಮಶಾನದ ಸ್ಥಳಗಳಿಗೆ ಜಮೀನನ್ನು ಒದಗಿಸಲು ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತದೆ. ಒಂದು ವೇಳೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸರ್ಕಾರಿ ಜಮೀನು ಯಾವುದೇ ಗ್ರಾಮದಲ್ಲಿ ಲಭ್ಯವಿಲ್ಲದಿದ್ದರೆ ಅಂತಹ ಪ್ರಸಂಗಗಳಲ್ಲಿ ಖಾಸಗಿ ಜಮೀನನ್ನು ಸದರಿ ಉದ್ದೇಶಕ್ಕೆ ಖರೀದಿಸಲು ಸೂಚಿಸಿರುತ್ತದೆ. ಖಾಸಗಿ ಜಮೀನು ಖರೀದಿಸಲು ಸರ್ಕಾರವು ಒಂದು ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟಿದೆ.

ವಿಭಾಗಾಧಿಕಾರಿಗಳ ಹುದ್ದೆಯ ರದ್ದತಿ.

398 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮಿತವ್ಯಯದ ಅಂಗವಾಗಿ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸಿರುವುದು ನಿಜವೇ?